**<u>ದಿನಾಂಕಃ 29.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಾದ ಶ್ರೀ.ಕೆ.ಎಂ. ರವರಿಂದಃ</u>**

1) ಯಾವ ಅಪಘಾತದಲ್ಲಿ ನನ್ನ ಗಂಡನು ಮರಣ ಹೊಂದಿದ್ದಾರೋ ಆ ಅಪಘಾತವನ್ನು ನಾನು ನೋಡಿರುವುದಿಲ್ಲ. ನನ್ನ ಗಂಡನಿಗೆ ಅಪಘಾತ ಆಗಿದೆ ಎಂಬ ವಿಷಯವನ್ನು ಓರ್ವ ನಾಗರಾಜು ಎನ್ನುವವರು ನನಗೆ ದೂರವಾಣಿ ಮೂಲಕ ತಿಳಿಸಿದ್ದಾರೆ.

2) ಅಪಘಾತದ ಸಮಯದಲ್ಲಿ ನನ್ನ ಗಂಡನು ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನದ ಆರ್.ಸಿ ಪುಸ್ತಕವನ್ನು ಮತ್ತು ನನ್ನ ಗಂಡನ ಚಾಲನಾ ಪರವಾನಗಿಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನ್ನ ಗಂಡನಿಗೆ ಚಾಲನಾ ಪರವಾನಗಿ ಇರಲಿಲ್ಲ ಮತ್ತು ನನ್ನ ಗಂಡನು ಚಾಲನೆ ಮಾಡುತ್ತಿದ್ದ ವಾಹನಕ್ಕೆ ಆರ್.ಸಿ ಪುಸ್ತಕ ಅಥವಾ ವಿಮಾ ಪಾಲಿಸಿ ಇರಲಿಲ್ಲ ಮತ್ತು ಕೇವಲ ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

3) ಅಪಘಾತದ ಸಮಯದಲ್ಲಿ ಕಾರನ್ನು ಅಂದರೆ ಯಾವ ಕಾರು ಅಪಘಾತವನ್ನು ಮಾಡಿದೆಯೋ ಆ ಕಾರನ್ನು ಎಷ್ಟು ವೇಗವಾಗಿ ಚಾಲನೆ ಮಾಡುತ್ತಾ ಇದ್ದರು

ಎಂದು ನನಗೆ ಗೊತ್ತಿಲ್ಲ.

4) ನನ್ನ ಗಂಡನಿಗೆ ಸಮರ್ಪಕವಾಗಿ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ ಮತ್ತು ನನ್ನ ಗಂಡನೇ ಬೇಕಾಬಿಟ್ಟಿಯಾಗಿ ತನ್ನ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿದ್ದಾನೆ ಮತ್ತು ತಮ್ಮ ದ್ವಿಚಕ್ರ ವಾಹನವನ್ನು ತಾವೇ ಕಾರಿಗೆ ಡಿಕ್ಕಿ ಹೊಡೆಸಿದ್ದಾರೆ ಎಂದರೆ ಸುಳ್ಳು.

5) ಮೇಲೆ ನನಗೆ ಸೂಚಿಸಿದ ಹಾಗೆ ಘಟನೆಗಳು ಆಗಿವೆ ಮತ್ತು ಅಪಘಾತವು ನನ್ನ ಗಂಡನ ತಪ್ಪಿನಿಂದಲೇ ಆಗಿದೆ ಮತ್ತು ಈಗ ಕೇವಲ ಪರಿಹಾರವನ್ನು ಪಡೆಯಬೇಕು ಎಂಬ ದುರುದ್ದೇಶದಿಂದ ನಾನು ಕಾರಿನ ಚಾಲಕನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

6) ಅಪಘಾತದ ನಂತರ ನನ್ನ ಗಂಡನ ಮೃತದೇಹವನ್ನು ನಮ್ಮ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ಅಂತ್ಯಕ್ರಿಯೆಯನ್ನು ಮತ್ತು ಇತರೆ ಕಾರ್ಯಗಳನ್ನು ಮಾಡಲಾಗಿದೆ ಮತ್ತು ಆ ಸಂಬಂಧವಾಗಿ ನಮಗೆ **30** ಸಾವಿರ ರೂಪಾಯಿಗಳು ಖರ್ಚು ಆಗಿದೆ.

7) ಮರಳವಾಡಿ ಎಂಬ ಗ್ರಾಮದಲ್ಲಿ ಇರುವ ಒಂದು ತೋಟದಲ್ಲಿ ನನ್ನ ಗಂಡನು **watchman** ಕೆಲಸ ಮಾಡುತ್ತಿದ್ದರು. ಅಲ್ಲಿ ನನ್ನ ಗಂಡನಿಗೆ ಒಂದು

ತಿಂಗಳಿಗೆ **50** ಸಾವಿರ ಸಂಬಳ ಬರುತ್ತಿತ್ತು. ನನ್ನ ಗಂಡನಿಗೆ ಅಷ್ಟು ಸಂಬಳ ಬರುತ್ತಿತ್ತು ಎನ್ನುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನನ್ನ ಗಂಡನು ಕೆಲಸ ಮಾಡುತ್ತಿದ್ದ ತೋಟದ ಮಾಲೀಕರು ವೈದ್ಯರಾಗಿದ್ದಾರೆ, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಹೇಳಿದ ಹಾಗೆ ನನ್ನ ಗಂಡನಿಗೆ ಒಂದು ತಿಂಗಳಿಗೆ **50** ಸಾವಿರ ರೂಪಾಯಿ ಸಂಬಳ ಬರುತ್ತಿರಲಿಲ್ಲ ಮತ್ತು ಈ ವಿಷಯದಲ್ಲಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

8) ನನ್ನ ಗಂಡನು ಯಾವ ಏಜನ್ಸಿಯಲ್ಲಿ ಸೆಕ್ಯೂರಿಟಿಯಾಗಿ ಕೆಲಸ ಮಾಡುತ್ತಿದ್ದನು ಎಂದು ಹೇಳಲು ಸಾಧ್ಯವಿಲ್ಲ. ನನ್ನ ಗಂಡನು ಯಾವುದೇ ಸೆಕ್ಯೂರಿಟಿ ಕೆಲಸ ಮಾಡುತ್ತಿರಲಿಲ್ಲ ಮತ್ತು ಆತನಿಗೆ ಯಾವುದೇ ಸಂಬಳ ಬರುತ್ತಿರಲಿಲ್ಲ ಎಂದರೆ ಸುಳ್ಳು.

9) ನಾನು ಮತ್ತು ನನ್ನ ಗಂಡನ ತಂದೆ ತಾಯಿ ಮತ್ತು ನನ್ನ ಮಕ್ಕಳು ಮತ್ತು ನನ್ನ ಗಂಡನ ಎರಡನೇ ಹೆಂಡತಿಯು ಈ ಪ್ರಕರಣವನ್ನು ಮಾಡಿದ್ದೇವೆ. ನನ್ನ ಗಂಡನಿಗೆ ಇಬ್ಬರು ಅಕ್ಕಂದಿರು ಮತ್ತು ಒಬ್ಬ ಅಣ್ಣ ಇದ್ದಾರೆ. ನಾನು ಮತ್ತು ಇತರೆ ಅರ್ಜಿದಾರರು ಪರಸ್ಪರ ಸಂಬಂಧಿಗಳು ಆಗಿದ್ದೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

10) ನಾನು ಹೇಳಿದ ಹಾಗೆ ಮೇಲೆ ಹೇಳಿದ ಕಾರು ಅಂದರೆ ಕೆಎ**-05-**ಎಂಡಿ**-7538** ಸಂಖ್ಯೆಯ ವಾಹನದಿಂದ ಆಗಲೀ ಅಥವಾ ಸದರಿ ವಾಹನದ ಚಾಲಕನಿಂದ ಆಗಲೀ ನನ್ನ ಗಂಡನಿಗೆ ಯಾವುದೇ ತೊಂದರೆಗಳು ಆಗಿರುವುದಿಲ್ಲ ಮತ್ತು ಕೇವಲ ಪರಿಹಾರವನ್ನು ಪಡೆಯಬೇಕು ಎಂಬ ದುರುದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

11) ಮೇಲೆ ಹೇಳಿದ ಕಾರಿನ ಚಾಲಕನಿಂದ ನಮಗೆ ಯಾವುದೇ ತೊಂದರೆಯು ಆಗಿಲ್ಲದೇ ಇರುವುದರಿಂದ ಈ ಪ್ರಕರಣವು ನಿಲ್ಲತಕ್ಕ ಪ್ರಕರಣ ಆಗಿರುವುದಿಲ್ಲ ಎಂದರೆ ಸುಳ್ಳು. ನನ್ನ ಗಂಡನು ಕೆಲಸ ಮಾಡುತ್ತಿದ್ದಂತಹ ತೋಟದ ಮಾಲೀಕರನ್ನು ವಿಚಾರಣೆ ಮಾಡಲು ನನಗೆ ತೊಂದರೆ ಇರುವುದಿಲ್ಲ. ಮೇಲೆ ಹೇಳಿದ ಕಾರಿನ ಮೇಲೆ ಮತ್ತು ಕಾರಿನ ಚಾಲಕ ಮತ್ತು ಮಾಲೀಕನ ಮೇಲೆ ನಾವು ಸುಳ್ಳು ಪ್ರಕರಣವನ್ನು ಮಾಡಿದ್ದೇವೆ ಎಂದರೆ ಸುಳ್ಳು.

**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ ಮತ್ತು ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.